ಓಎಸ್ ನಂ ೨೫೨-೨೦೧೫

ಪಿಡಬ್ಲ್ಯೂ-5

**ಸಾಕ್ಷಿಯನ್ನು ಇಂದು ದಿನಾಂಕಃ 02-03-2021 ರಂದು ಕರೆಯಿಸಿ ಪ್ರಮಾಣಿಕರಿಸಲಾಯಿತು.**

ಪಾಟೀ ಸವಾಲುಃ ಶ್ರೀ ಪಿ ಎನ್ ಎಸ್ ವಕೀಲರಿಂದ.

ವಾದಿ ನನ್ನ ಖಾಸಾ ಸಹೋದರ. ಕಳೆದ 25 ವರ್ಷಗಳಿಂದ ಆತ ಲಾರಿ ಚಾಲಕನಾಗಿ ಕೆಲಸ ಮಾಡುತ್ತಾನೆ, ಆತ ಮಾದನಹಿಪ್ಪರಗಾದಲ್ಲಿ ಇರುತ್ತಾನೆ. 2 ನೇ ಪ್ರತಿವಾದಿಗೆ ವಾದಿ ಕಬ್ಜೆಕೊಡುವಂತೆ ಕೇಳಿದ ಆತ ಕೊಡಲಿಲ್ಲ ಹಾಗಾಗಿ ವಾದಿ ಈ ದಾವೆಯನ್ನು ಹೂಡಿದ್ದಾನೆ ಎಂದರೆ ಸಾಕ್ಷಿಯು ಸರಿಯೆನ್ನುವಂತೆ ತಲೆ ಆಡಿಸಿದ್ದಾನೆ, ಅದಕ್ಕೆ ವಾದಿ ಪರ ವಕೀಲರು ಆತ ಬಾಯಿಬಿಟ್ಟು ಹೇಳಲಿಲ್ಲ ಎಂದು ಆಕ್ಷೇಪಣೆ ಸಲ್ಲಿಸಿರುತ್ತಾರೆ.

2 ನೇ ಪ್ರತಿವಾದಿ ನನ್ನ ತಂದೆ ಇರುವವರೆಗೆ ಮನೆಯ ಹೊಲೆಯ ಎಂದು ಕೆಲಸ ಮಾಡಿದ್ದಾನೆ ಎಂದರೆ ಆತ ಕೆಲಸ ಮಾಡಿದ್ದಾನೆ ಮತ್ತು ಆತನ ಕೂಲಿ ಒಯಿದಿದ್ದಾನೆ ಎಂದು ಸಾಕ್ಷಿ ನುಡಿಯತ್ತಾರೆ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ 90 ರೂಪಾಯಿಗಳಿಗೆ 2 ನೇ ಪ್ರತಿವಾದಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೆ.ಸರಿ.ಇದೆ.**

ಅಪರ ಸಿವಿಲ್ ನ್ಯಾಯಾಧೀಶರು

ಆಳಂದ.